sdmimd

# Kannada Prabha

**Date:** June 11, 2016 **Page No.04**

**Edition:** Mysuru **Language: Kannada**

# ಎಸ್‌ಡಿಎಂ, ಐಎಂಡಿ ವಿದ್ಯಾರ್ಥಿಗಳಿಂದ ಎರಡು ಸಂಸ್ಥೆಗಳಿಗೆ ಆರ್ಥಿಕ ಸಹಾಯ

## ಕಲಿಯುವಿಕೆಗೆ ಅವಶ್ಯಕವಿರುವ ಸಾಮಗ್ರಿ ಖರೀದಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಎಸ್‌ಡಿಎಂ- ಐಎಂಡಿ ಸಂಸ್ಥೆಯ ವಿದ್ಯಾರ್ಥಿಗಳು ಮೈಸೂರಿನ ಎರಡು ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಿದ್ದಾರೆ.

ನಿರೀಕ್ಷೆ - ವಿಶೇಷ ಮಕ್ಕಳ ಕ್ಷೇಮವನ್ನು ನೋಡಿಕೊಳ್ಳುವ ಸಂಸ್ಥೆ ಹಾಗೂ ಎಂಡಿಪಿಎಇಡಿಡಿ (ಮೈಸೂರ್ ಡಿಸ್ಟ್ರಿಕ್ಟ್ ಪೇರೆಂಟ್ಸ್ ಅಸೋಸಿಯೇಶನ್ ಫಾರ್ ಎಂಪವರಿಂಗ್ ಡೆವಲಪ್ಮೆಂಟಲಿ ಡಿಸೇಬಲ್ಡ್) ಸಂಸ್ಥೆಯ ವಿಶೇಷ ಮಕ್ಕಳ ಕಲಿಯುವಿಕೆಗೆ ಅವಶ್ಯಕವಿರುವ ಸಾಮಗ್ರಿಗಳನ್ನು ಹೊಂದಲು ವಿದ್ಯಾರ್ಥಿಗಳು ಸಹಾಯ ಮಾಡಿದ್ದಾರೆ.

ವಿದ್ಯಾರ್ಥಿಗಳು ನಿರೀಕ್ಷೆ ಸಂಸ್ಥೆಗೆ ₹ 20,000 ಮೊತ್ತದ ಮತ್ತು ಎಂಡಿಪಿಎಇಡಿಡಿಗೆ ₹ 25,000 ಮೊತ್ತದ ಚೆಕ್ ನೀಡಿದ್ದಾರೆ. ಅಲ್ಲದೆ. ಸರ್ಕಾರಿ ಬಾಡಿಗಾರ್ಡ್ ಲೇನ್ ಶಾಲೆಯ 1 ರಿಂದ 7ನೇ ತರಗತಿಯವರೆಗಿನ ಮಕ್ಕಳಿಗೆ 1200 ನೋಟ್ ಪುಸ್ತಕಗಳನ್ನು ವಿತರಿಸಿದ್ದಾರೆ. ನಿರ್ಗತಿಕ ಹಾಗೂ ಪರಿತ್ಯಕ್ತ ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶಕ್ತಿಧಾಮ ಸಂಸ್ಥೆಯ ಪ್ರಾಮಾಣಿಕ ಪ್ರಯತ್ನವನ್ನು ಗುರುತಿಸಿ, ಅಲ್ಲಿನ ಊಟದ ಸಭಾಂಗಣಕ್ಕೆ ಪ್ಲಾಸ್ಟಿಕ್ ಕುರ್ಚಿಗಳನ್ನು ನೀಡಲಾಯಿತು.

ಎಸ್‌ಡಿಎಂ- ಐಎಂಡಿ ಸಂಸ್ಥೆಯ ವಿದ್ಯಾರ್ಥಿಗಳು ಪ್ರತಿ ವರ್ಷವೂ ತಮ್ಮ ಸಾಮಾಜಿಕ ಕಳಕಳಿಯ ಯೋಜನೆಯ ಭಾಗವಾಗಿ ದತ್ತಿ ಟ್ರಸ್ಟ್‌ಗಳು, ಎನ್‌ಜಿಓಗಳನ್ನು ಗುರುತಿಸಿ, ಆರ್ಥಿಕ ಸಹಾಯಹಸ್ತ ನೀಡುತ್ತಾ ಬಂದಿದ್ದಾರೆ.

ಸಂಸ್ಥೆಯ ಆಡಳಿತ ವ್ಯವಸ್ಥಾಪಕ ಸಿ.ವಿ. ಶ್ರೀಧರ್, ವಿದ್ಯಾರ್ಥಿ ಬಳಗದ ವಿನಯ್ ಪ್ರಭಾಕರ್, ಕೆ.ಆರ್. ಅಮೃತ, ಸುರಭೀ ಮಿಶ್ರ, ಹರ್ಷಿತ್ ಗೌಡ, ವಿನಯ್ ಮೊದಲಾದವರು ಈ ಕಾರ್ಯದಲ್ಲಿ ಭಾಗವಹಿಸಿದ್ದರು.

KP

